

بسم اللهِ الرّحمٰن الرّحيم

# ಸತ್ಯವಿಶ್ವಾಸದಲ್ಲಿ ದೃಢಚಿತ್ತರಾಗಿದ್ದುಕೊಂಡು, ಆತ್ಮ ಪರಿಶೀಲನೆ ಮಾಡುತ್ತಾ ತಖ್ವದಲ್ಲಿ ಮುನ್ನೇರುವವರಿಗೆ ಮಾತ್ರವೇ ಲೈಲತುಲ್ ಖದ್‌ರ್ ಲಭಿಸುವುದು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ**10-07-2015** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಅಲ್ಲಾಹನ ಅನುಗ್ರಹದಿಂದ ಈ ದಿನ ಇಪ್ಪತ್ತೆರಡು ಉಪವಾಸ ದಿನಗಳು ದಾಟಿ ಹೋದ ದಿನವಾಗಿದೆ ಅಥವಾ ಈ ದಿನ ಇಪ್ಪತ್ತೆರಡನೆಯ ಉಪವಾಸದ ದಿನವಾಗಿದೆ. ಈಗ ನಾವು ರಮಝಾನಿನ ಕೊನೆಯ ಅಶ್‌ರದಲ್ಲಿ (ಹತ್ತು ದಿನಗಳಲ್ಲಿ) ಇದ್ದೇವೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಹೇಳಿದ್ದಾರೆ: ಪ್ರಥಮ ಹತ್ತು ದಿನಗಳು ರಹ್ಮತ್ತಿನ (ಕಾರುಣ್ಯದ) ಅಶ್ರ ಆಗಿದೆ. ದ್ವಿತೀಯ ಹತ್ತು ದಿನಗಳು ಮಗ್‌ಫಿರತ್ (ಕ್ಷಮೆಯ) ಅಶ್ರ ಆಗಿದೆ. ಈ ಎರಡು ಅಶ್ರಗಳ ನಂತರ ತೃತೀಯ ಅಶ್ರ, ನರಕದಿಂದ ಮೋಕ್ಷನೀಡುವ ಅಶ್ರವಾಗಿದೆ. ನಾವು ಈಗ ಈ ತೃತೀಯ ಅಶ್ರದಲ್ಲಿದ್ದೇವೆ. ಅಲ್ಲಾಹನು ನಮಗೆ ಈ ಸಂದರ್ಭ ಒದಗಿಸಿಕೊಟ್ಟು ನಮಗೆ ಅಪರಿಮಿತವಾದ ಔದಾರ್ಯ ತೋರಿಸಿದ್ದಾನೆ. ಆದರೆ ಅಲ್ಲಾಹನನ್ನು ನಂಬುವ ಸತ್ಯವಿಶ್ವಾಸಿ ಅಲ್ಲಾಹನ ಭಯಭಕ್ತಿ (ತಖ್ವ) ಹೊಂದುವುದಕ್ಕೋಸ್ಕರ ಪ್ರಯತ್ನಿಸುತ್ತಾನೆ. ಅವನ ಹೃದಯ ಅಲ್ಲಾಹನ ಭಯದಿಂದ ತುಂಬಿರುತ್ತದೆ. ಅವನು ಅಲ್ಲಾಹನು ನನಗೆ ಈ ದಿನಗಳನ್ನು ಒದಗಿಸಿಕೊಟ್ಟು ನನಗೆ ಕಾರುಣ್ಯ, ಕ್ಷಮೆ, ಮೋಕ್ಷ ಲಭಿಸುವಂತೆ ಮಾಡಿರುವನೆಂದು ತೃಪ್ತಿಪಡಲಾರನು. ಈ ದಿನಗಳು ನಿಶ್ಚಯವಾಗಿಯೂ ಕಾರಣ್ಯ, ಕ್ಷಮೆ ಮತ್ತು ನರಕದಿಂದ ಮೋಕ್ಷ ನೀಡುವ ದಿನಗಳಾಗಿವೆ. ಆದರೆ ನಾವು ಈ ದಿನಗಳ ಅನುಗ್ರಹಗಳಿಂದ ಏನನ್ನಾದರೂ ಗಳಿಸಿದ್ದೇವೆಯೇ? ಎಂದು ನೋಡಬೇಕಾಗಿದೆ. ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಆಜ್ಞೆಗಳೂ ಉಪದೇಶಗಳೂ ಶರತ್ತುಗಳಿಗೊಳಪಟ್ಟಿರುತ್ತವೆ. ಅವುಗಳೊಂದಿಗೆ ಕೆಲವು ಶರತ್ತುಗಳಿರುತ್ತವೆ. ಈ ದಿನಗಳ ಕಾರುಣ್ಯದಿಂದ ಅನುಗ್ರಹ ಪಡೆಯಲು ಕೆಲವು ಶರತ್ತುಗಳಿವೆ. ಕ್ಷಮೆಗಳಿಸಲು ಸಹ ಕೆಲವು ಶರತ್ತುಗಳಿವೆ. ನರಕದಿಂದ ಮೋಕ್ಷ ಲಭಿಸಲು ಸಹ ಶರತ್ತುಗಳಿರುತ್ತವೆ. ಈ ಶರತ್ತುಗಳನ್ನು ಈಡೇರಿಸುವುದು ಆವಶ್ಯಕವಾಗಿದೆ.

ನಾವು ಈ ಅನುಗ್ರಹಗಳನ್ನು ಗಳಿಸಲು ಅಲ್ಲಾಹನ ಸಂಪ್ರೀತಿ ಗಳಿಸುವಂತೆ ಮಾಡುವುದು ಯಾವುವು ಎನ್ನುವುದನ್ನು ಕಂಡುಕೊಳ್ಳಬೇಕಾದ ಆವಶ್ಯಕತೆಯಿದೆ. ಅಲ್ಲಾಹನ ರಹ್ಮತ್ (ಕಾರುಣ್ಯ) ಬಗ್ಗೆ ಪವಿತ್ರ ಖುರ್‌ಆನಿನ ವ್ಯಾಖ್ಯಾನಗಾರರು ಅವು ಎರಡು ರೀತಿಗಳಲ್ಲಿವೆ ಎಂದು ವಿವರಿಸಿದ್ದಾರೆ. ಒಂದು ರೀತಿಯ ಕಾರುಣ್ಯವು ಅಲ್ಲಾಹನ ಕಡೆಯಿಂದ ಔದಾರ್ಯವಾಗಿರುತ್ತದೆ. ಅದನ್ನು ಗಳಿಸಲು ಮನುಷ್ಯನು ಪ್ರಯತ್ನ ಮಾಡಬೇಕಾಗಿರುವುದಿಲ್ಲ. ಅಲ್ಲಾಹನು ಇದರ ಬಗ್ಗೆ ಹೀಗೆ ಹೇಳುತ್ತಾನೆ.

**ರಹ್ಮತೀ ವಸಿಅತ್ ಕುಲ್ಲ ಶೈಯಿನ್.**

"ನನ್ನ ಕರುಣೆಯು ಸರ್ವವನ್ನು ಆವರಿಸಿಕೊಂಡಿದೆ" - (ಪವಿತ್ರ ಖುರ್‌ಆನ್ 7: 157)

ಅಲ್ಲಾಹನ ಈ ಕಾರುಣ್ಯದಿಂದ ಎಲ್ಲ ಜನರು ಪಾಲು ಪಡೆಯುತ್ತಾರೆ. ಅವರು ಯಾವುದೇ ಕೆಲಸ ಮಾಡದಿದ್ದರೂ ಅವರಿಗೆ ಕಾರುಣ್ಯದ ಪಾಲು ಸಿಗುತ್ತದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಈ ವಚನದ ಬಗ್ಗೆ ಹೀಗೆ ಹೇಳಿದ್ದಾರೆ: "ಅಲ್ಲಾಹನ ಕಾರುಣ್ಯ ಸಾರ್ವತ್ರಿಕವಾಗಿದೆ. ಅವನ ಕೋಪ (ಗಝಬ್) ಎಂದರೆ ಅವನ ನ್ಯಾಯಪಾಲಕ ಎಂಬ ಗುಣವು ಪ್ರತ್ಯೇಕ ಸಂದರ್ಭದಲ್ಲಿ ಹುಟ್ಟುವುದಾಗಿದೆ. ಅಲ್ಲಾಹನ ನಿಯಮಗಳನ್ನು ಮೀರುವಾಗ ಈ ಗುಣ ಕಾರ್ಯಪ್ರವೃತ್ತವಾಗುತ್ತದೆ. ಆದುದರಿಂದ ಮೊತ್ತಮೊದಲು ದೇವನಿಯಮಗಳು ಜಾರಿಗೊಳ್ಳುತ್ತವೆ. ದೇವನಿಯಮಗಳ ಉಲ್ಲಂಘನೆಯಿಂದ ಪಾಪ ಉಂಟಾಗುತ್ತದೆ. ಆಗ ಅಲ್ಲಾಹನ ಕೋಪ (ಗಝಬ್) ಪ್ರಕಟಗೊಳ್ಳುತ್ತದೆ. ಸತ್ಯವಿಶ್ವಾಸ ಆವಶ್ಯಪಡುವುದೇನೆಂದರೆ ಸತ್ಯವಿಶ್ವಾಸವನ್ನು ಸರಿಯಾಗಿ ಹೊಂದಬೇಕು. ಅಲ್ಲಾಹನ ಆಜ್ಞೆಗಳನ್ನು ಪಾಲಿಸಲು ಪರಿಪೂರ್ಣ ಸಾಮರ್ಥ್ಯದೊಂದಿಗೆ ಪ್ರಯತ್ನಿಸಬೇಕು. ವಾಸ್ತವಿಕವಾಗಿ ಒಬ್ಬನು ಸತ್ಯವಿಶ್ವಾಸಿಯಾಗಿದ್ದರೆ ಪೂರ್ಣವಾಗಿ ಪ್ರಯತ್ನಿಸಿದ ನಂತರ ಸಹ ಮಾನವೀಯ ದೌರ್ಬಲ್ಯದ ಕಾರಣದಿಂದ ಯಾವುದಾದರೂ ಪಾಪಕೃತ್ಯ ಮಾಡಿದರೆ, ಅಲ್ಲಾಹನ ಕಾರುಣ್ಯ ಅವನ ಆ ಪಾಪಕೃತ್ಯವನ್ನು ಮರೆಮಾಡುತ್ತದೆ."

ಇನ್ನೊಂದು ಸ್ಥಳದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಶಿಕ್ಷೆಯ ಮುನ್ನೆಚ್ಚರಿಕೆಯಲ್ಲಿ ವಾಸ್ತವಿಕವಾಗಿ ಶಿಕ್ಷೆಯ ಬಗ್ಗೆ ವಾಗ್ದಾನ ಇರುವುದಿಲ್ಲ. ಅಲ್ಲಾಹನು ಪರಮ ಪರಿಶುದ್ಧನಾಗಿರುವ ಕಾರಣ ಅಪರಾಧಿಗೆ ಶಿಕ್ಷೆ ನೀಡುವ ಆವಶ್ಯಕತೆ ಉಂಟಾಗುತ್ತದೆ. ಕೆಲವೊಮ್ಮೆ ಅಲ್ಲಾಹನು ಇದರ ಬಗ್ಗೆ ತಾನು ಸಂದೇಶವಾಣಿ ಅರುಹುವವರಿಗೆ ತಿಳಿಸುತ್ತಾನೆ. ಆದರೆ ಒಬ್ಬ ಅಪರಾಧಿ ಪಶ್ಚಾತ್ತಾಪಗೊಂಡು ಪ್ರಾರ್ಥಿಸುತ್ತಾ ಕ್ಷಮೆ ಯಾಚಿಸುತ್ತಾ ಗೋಳಿಡುವಾಗ ಅಲ್ಲಾಹನ ಕಾರುಣ್ಯ ಗುಣವು ಅವನ ಕೋಪದ ಗುಣದ ಮೇಲೆ ಮೇಲ್ಗೈ ಪಡೆಯುತ್ತದೆ. ಕೆಲವು ಸಾರಿ ಮೊದಲು ತಿಳಿಸಿದ ನಂತರ ಶಿಕ್ಷೆ ಸಹ ಬಂದೆರಗುತ್ತದೆ. ವಿಧಿಸಲ್ಪಟ್ಟ ಶಿಕ್ಷೆ ಜಾರಿಯಾಗುತ್ತದೆ. ಆದರೆ ಯಾರ ಬಗ್ಗೆ ಶಿಕ್ಷೆ ನೀಡುವ ತೀರ್ಪು ಆಗಿದೆಯೋ ಅವನು ಪಶ್ಚಾತ್ತಾಪಗೊಂಡು ಕ್ಷಮೆಯಾಚಿಸುವಾಗ ಅವನು ಶಿಕ್ಷೆಯಿಂದ ರಕ್ಷಣೆ ಸಹ ಪಡೆಯುತ್ತಾನೆ. ಅಲ್ಲಾಹನ ಕಾರುಣ್ಯ ಗುಣ ಅವನ ಕ್ರೋಧ ಗುಣದ ಮೇಲೆ ಆಧಿಪತ್ಯ ಹೊಂದುತ್ತದೆ. ಅವನು ತನ್ನ ಕೋಪದ ಮೇಲೆ ಪರದೆ ಹಾಕುತ್ತಾನೆ ಮತ್ತು ಅಪರಾಧಿಯನ್ನು ಕ್ಷಮಿಸುತ್ತಾನೆ. **ಅಝಾಬಿ ಉಸೀಬು ಬಿಹೀ ಮನ್‌ಯಶಾವು ವ ರಹ್ಮತೀ ವಸಿಅತ್ ಕುಲ್ಲ ಶೈಯಿನ್.** 'ನಾನು ಇಚ್ಛಿಸುವವರಿಗೆ (ಅದಕ್ಕೆ ಅರ್ಹರಾದವರಿಗೆ) ನಾನು ಶಿಕ್ಷೆ ವಿಧಿಸುವೆನು. ನನ್ನ

ಕರುಣೆಯು ಸರ್ವವನ್ನು ಆವರಿಸಿದೆ.'(7:157) ಎಂಬ ಪವಿತ್ರ ಖುರ್‌ಆನಿನ ವಚನ ಇದನ್ನೇ ಸೂಚಿಸುತ್ತದೆ. ಅಂದರೆ ಅಲ್ಲಾಹನ ಕಾರುಣ್ಯ ಅವನ ಕೋಪದ ಗುಣಕ್ಕಿಂತಲೂ ಮಿಗಿಲಾದುದು. ಅಪರಾಧಿಗಳು ಪಶ್ಚಾತ್ತಾಪಗೊಂಡು ಕ್ಷಮೆ ಯಾಚಿಸಿದರೆ ಅಲ್ಲಾಹನು ಅವರನ್ನು ಸಹ ಕ್ಷಮಿಸುತ್ತಾನೆ. ಅಪರಾಧಗಳಲ್ಲಿ ಬಹಳ ಮುಂದುವರಿದವರಿಗೆ ಶಿಕ್ಷೆ ವಿಧಿಸಲ್ಪಟ್ಟಿರುತ್ತದೆ. ಅಂತಹವರಿಗೆ ಸಹ ಅಲ್ಲಾಹನು ಇಚ್ಛಿಸಿದರೆ ಕ್ಷಮಿಸುತ್ತಾನೆ."

ಮತ್ತೂ ಹೇಳುತ್ತಾರೆ: "ಶಿಕ್ಷೆ ವಿಧಿಸಲ್ಪಟ್ಟ ಅಪರಾಧಿಗಳು ಅಲ್ಲಾಹನೊಂದಿಗೆ ಅತ್ತುಕೊಂಡು ಪ್ರಾರ್ಥಿಸಿದರೆ ಅಂತಹ ಜನರನ್ನು ಸಹ ಅಲ್ಲಾಹನು ಕ್ಷಮಿಸುತ್ತಾನೆ. ಕೆಲವು ಸಾರಿ ಅಲ್ಲಾಹನು ಈ ಶಿಕ್ಷೆ ಬಂದೆರಗುವ ಬಗ್ಗೆ ತನ್ನ ಸಂದೇಶವಾಹಕರಿಗೆ ತಿಳಿಸಿಯೂ ಇರುತ್ತಾನೆ. ಆದರೆ, ಇಂತಹ ಸಂದರ್ಭದಲ್ಲಿಯೂ ಅಪರಾಧಿಯಾದವನು ವಿನಯ ಭಾವದಿಂದ ಅಳುತ್ತಾ ಪಶ್ಚಾತ್ತಾಪಗೊಂಡು ಕ್ಷಮೆ ಯಾಚಿಸಿದರೆ ಅಲ್ಲಾಹನು ಅವನನ್ನು ಕ್ಷಮಿಸಿಬಿಡುತ್ತಾನೆ."

ಆದರೆ ಸತ್ಯವಿಶ್ವಾಸಿಯಾದವನು ಹೀಗೆ ಇರುವುದಿಲ್ಲ. ಅವನು ಮೊದಲು ಅಪರಾಧ ಮಾಡಿ ಅನಂತರ ಕ್ಷಮೆಯಾಚಿಸಿ ಅಲ್ಲಾಹನ ಕಾರುಣ್ಯ ಬೇಡಿಕೊಳ್ಳುವುದಿಲ್ಲ. ಸತ್ಯವಿಶ್ವಾಸಿಗಳಿಗೆ ಇನ್ನೊಂದು ರೀತಿಯ ಕಾರುಣ್ಯ ಸತ್ಯವಿಶ್ವಾಸಿಯ ಕರ್ಮಗಳಿಗನುಸಾರವಾಗಿ ಜಾರಿಗೊಳ್ಳುತ್ತದೆ. ಸತ್ಕರ್ಮ ಮಾಡುವವರಿಗೆ ಇದರ ಬಗ್ಗೆ ವಾಗ್ದಾನ ನೀಡಲಾಗಿದೆ. ಇದರ ಬಗ್ಗೆ ಅಲ್ಲಾಹನು ಹೀಗೆ ಹೇಳಿದ್ದಾನೆ: **ಇನ್ನ ರಹ್ಮತಲ್ಲಾಹಿ ಖರೀಬುನ್ ಮಿನಲ್ ಮುಹ್‌ಸಿನೀನ್.** "ಖಂಡಿತವಾಗಿಯೂ ಅಲ್ಲಾಹನ ಕರುಣೆ ಮುಹ್‌ಸಿನ್‌ಗಳಿಗೆ ಸಮೀಪವಾಗಿದೆ"(7:57) ಮುಹ್‌ಸಿನ್ ಎಂದರೆ ಬೇರೆಯವರೊಂದಿಗೆ ಉತ್ತಮವಾಗಿ ವರ್ತಿಸುವವನು, ತಖ್ವ(ಭಯಭಕ್ತಿ) ಪ್ರಕಾರ ಕರ್ಮ ಮಾಡುವವನು, ಎಲ್ಲ ಶರತ್ತುಗಳ ಬಗ್ಗೆ ಜ್ಞಾನಗಳಿಸಿ ಶರತ್ತುಗಳನ್ನು ಈಡೇರಿಸುವವನು ಆಗಿರುತ್ತಾನೆ. ಇಂತಹ ಜನರ ಪ್ರಾರ್ಥನೆಗಳನ್ನು ಅಲ್ಲಾಹನು ಅಂಗೀಕರಿಸುವುದು ಅವನ ವಿಶಿಷ್ಟ ಕಾರುಣ್ಯವಾಗಿದೆ.

ಆದುದರಿಂದ ಪ್ರಾರ್ಥನೆಗಳು ಅಲ್ಲಾಹನಿಂದ ಅಂಗೀಕರಿಸಲ್ಪಡುವಂತಾಗಲು ಮುಹ್‌ಸಿನ್ ಆಗಬೇಕಾದುದು ಅನಿವಾರ್ಯವಾಗಿದೆ. ಮುಹ್‌ಸಿನ್ ಶಬ್ದದ ಅರ್ಥವನ್ನು ತನ್ನ ಮುಂದೆ ಇರಿಸಿಕೊಂಡು ಕಾರ್ಯ ಪ್ರವೃತ್ತನಾಗುವುದು ಆವಶ್ಯಕವಾಗಿದೆ. ಇದು ಸಾಮಾನ್ಯ ವಿಷಯವೇನೂ ಅಲ್ಲ. ಸಾಮಾನ್ಯ ಸತ್ಕರ್ಮಗಳ ಮೂಲಕ ಮನುಷ್ಯನು ಮುಹ್‌ಸಿನ್ ಆಗಲಾರ. ತನ್ನ ಅನುಷ್ಠಾನ ಕರ್ಮಗಳನ್ನು ಉನ್ನತ ಮಟ್ಟಕ್ಕೆ ಏರಿಸುವುದು ಇದಕ್ಕೆ ಆವಶ್ಯಕವಾಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಹೇಳಿದರು: ಪ್ರತಿಯೊಂದು ಒಳ್ಳೆಯ ಕೆಲಸ ಮಾಡುವಾಗ ತಾನು ಅಲ್ಲಾಹನನ್ನು ನೋಡುತ್ತಿರುವನೆಂಬ ಭಾವನೆ ಹೊಂದಬೇಕು. ಅದು ಸಾಧ್ಯವಾಗದಿದ್ದರೆ ಅಲ್ಲಾಹನು ನನ್ನನ್ನು ನೋಡುತ್ತಿದ್ದಾನೆ ಎಂಬ ಭಾವನೆಯನ್ನಾದರೂ ಹೊಂದಬೇಕು. ನಮ್ಮ ಪ್ರಾರ್ಥನೆಗಳು ಅಲ್ಲಾಹನಿಂದ ಅಂಗೀಕಾರ ಪಡೆಯಬೇಕೆಂದು ನಾವು ಬಹಳ ಆಶಿಸುತ್ತೇವೆ. ನಾವು ಅಲ್ಲಾಹನ ಕಾರುಣ್ಯಕ್ಕೆ ವಾರೀಸುದಾರರಾಗಬೇಕೆಂದು ಇಚ್ಛಿಸುತ್ತೇವೆ. ಆದರೆ ನಾವು ಅದನ್ನು ಗಳಿಸುವ ಅರ್ಹತೆ ಪಡೆಯಲು ಪ್ರಯತ್ನ ಮಾಡುವುದಿಲ್ಲ. ಅಥವಾ ನಮ್ಮವರಲ್ಲಿ ಬಹುತೇಕ ಜನರು ಪ್ರಯತ್ನ ಮಾಡುವುದಿಲ್ಲ. ಅಥವಾ ನಾವು ಕ್ರಮ ಬದ್ಧವಾಗಿ ನಿರಂತರ ಪ್ರಯತ್ನ ಮಾಡುವುದಿಲ್ಲ. ಹಾಗೆ ಪ್ರಯತ್ನ ಮಾಡಬೇಕಾದುದು ಸತ್ಯವಿಶ್ವಾಸಿಗೆ ಆವಶ್ಯಕವಾಗಿದೆ. ಅಲ್ಲಾಹನ ಕಾರುಣ್ಯದ ಅಶ್ರವನ್ನು ನಾವು ದಾಟಿ ಬಂದೆವು ಎಂದು ನಾವು ಸಂತೋಷಪಡುತ್ತೇವೆ. ಆದರೆ ಅಲ್ಲಾಹನ ಕಾರುಣ್ಯಗಳಿಸಲು ಏನೆಲ್ಲಾ ಮಾಡಬೇಕಾಗಿತ್ತು ಎಂದು ನಾವು ಯೋಚಿಸುವುದಿಲ್ಲ.

ನಾವು ಎಂತಹ ಕಾರುಣ್ಯ ಗಳಿಸಲು ಪ್ರಯತ್ನ ಮಾಡಬೇಕೆಂದರೆ ಅದು ಯಾವಾಗಲೂ ನಮ್ಮೊಂದಿಗಿರಬೇಕು. ಅದು ತಾತ್ಕಾಲಿಕವಾಗಿ ನಮ್ಮನ್ನು ಶಿಕ್ಷೆಯಿಂದ ರಕ್ಷಿಸಿದರೆ ಸಾಲದು. ಅನಂತರ ನಾವು ಮೊದಲಿನ ಸ್ಥಿತಿಗೆ ಬರುವಂತಹದು ಅದಾಗಬಾರದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ರಹ್ಮತ್ (ಕಾರುಣ್ಯ) ಎಂಬ ಪದವನ್ನು ಬಳಸಿ ನಮ್ಮ ಜೀವಿತಕ್ಕೋಸ್ಕರ ಕಾರ್ಯಕ್ರಮಗಳ ಒಂದು ಖಜಾನೆಯನ್ನೇ ನಮಗೆ ಒದಗಿಸಿಕೊಟ್ಟಿದ್ದಾರೆ. ಅವರು ಹೇಳಿದರು: ರಮಝಾನಿನ ಪ್ರಥಮ ಹತ್ತು ದಿನಗಳಲ್ಲಿ ಅಲ್ಲಾಹನ ಕಾರುಣ್ಯವನ್ನು ಹುಡುಕಿ ಪಡೆಯಿರಿ. ಅನಂತರ ಅದನ್ನು ತಮ್ಮ ಜೀವಿತದ ಭಾಗವನ್ನಾಗಿ ಮಾಡಿಕೊಳ್ಳಿರಿ.

ಒಬ್ಬ ಸತ್ಯವಿಶ್ವಾಸಿಗೆ ಹತ್ತು ದಿನದ ತರಬೇತಿಯು ಮುಂದಿನ ಮಾರ್ಗವನ್ನು ತೋರಿಸಿಕೊಡುತ್ತದೆ. ಆದರೆ ಶೈತಾನನು ಯಾವಾಗಲೂ ನಮ್ಮ ಜೊತೆ ಇರುತ್ತಾನೆ ಮತ್ತು ತನ್ನ ಕೆಲಸ ಮಾಡುತ್ತಾ ಇರುತ್ತಾನೆ. ಅವನು ದಾರಿ ತಪ್ಪಿಸುತ್ತಾ ಇರುತ್ತಾನೆ. ಒಳಿತಿನಿಂದ ದೂರ ಸರಿಸುವ ಕೆಲಸ ಮಾಡುತ್ತಾ ಇರುತ್ತಾನೆ. ಆದುದರಿಂದ ಅಲ್ಲಾಹನ ಕಾರುಣ್ಯ ಗಳಿಸಿದ ನಂತರ ಅದರಲ್ಲಿ ಸ್ಥಿರವಾಗಿರಲು ಅಲ್ಲಾಹನ ಸಹಾಯದ ಆವಶ್ಯಕತೆ ಇದೆ. ಏಕೆಂದರೆ ಅಲ್ಲಾಹನು ಮನುಷ್ಯನನ್ನು ಸೃಷ್ಟಿಸಿದ ನಂತರ ಅವನಿಂದ ದೂರ ಸರಿದು ಹೋಗುವುದಿಲ್ಲ. ಅಲ್ಲಾಹನು ಸೃಷ್ಟಿಕರ್ತ (ಖಾಲಿಖ್) ಆಗಿದ್ದಾನೆ. ಅವನು ಮನುಷ್ಯನ ಬಾಹ್ಯ ಮತ್ತು ಆಂತರಿಕವಾದ ಎಲ್ಲ ಶಕ್ತಿ ಸಾಮರ್ಥ್ಯಗಳನ್ನು ಸೃಷ್ಟಿಸಿದವನೂ ಆಗಿದ್ದಾನೆ. ಅಲ್ಲಾಹನು **ಖಯ್ಯೂಮ್** ಸಹ ಆಗಿದ್ದಾನೆ. ಅವನು ತಾನು ಸೃಷ್ಟಿಸಿದವುಗಳನ್ನು ತನ್ನ ಸಹಾಯದಿಂದ ಸಂರಕ್ಷಿಸುವವನೂ ಆಗಿದ್ದಾನೆ. ಇದು ಅವನ **ಖಯ್ಯೂಮ್** ಗುಣವಾಗಿದೆ. ಮನುಷ್ಯನಿಗೆ ಅತ್ಯಾವಶ್ಯಕವಾದುದೇನೆಂದರೆ, ಅವನು ಅಲ್ಲಾಹನ **ಖಾಲಿಖಿಯ್ಯತ್** ಎಂಬ ಗುಣದಿಂದ ಸೃಷ್ಟಿಗೊಂಡ ಪ್ರಕಾರ, ಅಲ್ಲಾಹನ **ಖಯ್ಯೂಮ್** (ನೆಲೆ ನಿಲ್ಲಿಸುವವನು) ಎಂಬ ಗುಣದಂತೆ ತನ್ನ ಸೃಷ್ಟಿಯ ನಕಾಶೆಯನ್ನು ಬಿಗಡಾಯಿಸದಂತೆ ಸಂರಕ್ಷಿಸಿ ನೆಲೆ ನಿಲ್ಲಿಸಬೇಕಾದುದು ಅತೀ ಅಗತ್ಯವಾಗಿದೆ.

ಬಿಗಡಾಯಿಸುವುದರಿಂದ ರಕ್ಷಣೆ ಪಡೆಯಲು, ಅಲ್ಲಾಹನ ನೆಲೆ ನಿಲ್ಲಿಸುವ ಗುಣದಿಂದ ಲಾಭ ಪಡೆಯಲು, ಮತ್ತು ಆಧ್ಯಾತ್ಮಿಕ ಸ್ಥಿತಿಯನ್ನು ಕಾಪಾಡಲು ಅಲ್ಲಾಹನು ತೋರಿಸಿಕೊಟ್ಟಿರುವ ಮಾರ್ಗವು "ಇಸ್ತಿಗ್‌ಫಾರ್ ಪ್ರಾರ್ಥನೆ ಮಾಡಿರಿ" ಎಂಬುದಾಗಿದೆ. ರಮಝಾನ್ ನಮಗೆ ಕ್ಷಮೆಯಾಚನೆ ಬಗ್ಗೆ ಗಮನ ಹರಿಸಿದೆ. ನಾವು ಯಾವಾಗಲೂ ಅಲ್ಲಾಹನಿಂದ ಕ್ಷಮೆಯಾಚಿಸುವ ಇಸ್ತಿಗ್‌ಫಾರ್ ಪ್ರಾರ್ಥನೆ ಮಾಡಲು ಗಮನ ಹರಿಸಲಾಗಿದೆ. ಅಲ್ಲಾಹನ ಕಾರುಣ್ಯದಿಂದ ಸ್ಥಿರವಾಗಿ ಪಾಲು ಪಡೆಯಲು ಇಸ್ತಿಗ್‌ಫಾರ್ ಪ್ರಾರ್ಥನೆ ಮಾಡುತ್ತಾ

ಇರಬೇಕಾಗಿದೆ. ಅಲ್ಲಾಹನು ಈ ದಿನಗಳಲ್ಲಿ ಬಹಳ ಔದಾರ್ಯವಂತನಾಗಿರುತ್ತಾನೆ. ಅವನ ಕಾರುಣ್ಯದ ಎರಡು ರೀತಿಯ ಅನುಗ್ರಹಗಳು ಜಾರಿಗೊಂಡಿರುತ್ತವೆ. ಅವನ ಕಾರುಣ್ಯದ ಒಂದು ರೀತಿಯ ಅನುಗ್ರಹದಿಂದ ಸತ್ಯವಿಶ್ವಾಸಿಗಳೂ ಅವಿಶ್ವಾಸಿಗಳೂ ಪಾಲು ಪಡೆಯುತ್ತಾರೆ. ಆದರೆ ಮುಹ್‌ಸಿನ್‌ಗಳಿಗೆ ವಿಶಿಷ್ಟ ಕಾರುಣ್ಯ ಲಭಿಸುತ್ತದೆ. ಈ ಅನುಗ್ರಹ ಗಳಿಸಲು ಸತ್ಕರ್ಮ ಮಾಡುವಾಗ ಇಸ್ತಿಗ್‌ಫಾರ್ ಪ್ರಾರ್ಥನೆ ಮಾಡುತ್ತಾ ಅಲ್ಲಾಹನ ಪ್ರಕಾಶದಿಂದ ಪ್ರಕಾಶ ಪಡೆಯಲು ಮತ್ತು ಅಲ್ಲಾಹನ ಶಕ್ತಿಯಿಂದ ಶಕ್ತಿ ಪಡೆಯಲು ಪ್ರಯತ್ನಿಸಬೇಕಾಗಿದೆ. ಅಲ್ಲಾಹನ ಪ್ರಕಾಶದಿಂದ ವಂಚಿತರಾಗಿ ಅಂಧಕಾರದಲ್ಲಿ ಅಲೆದಾಡುವಂತೆ ಆಗಬಾರದು. ಅಲ್ಲಾಹನ ಶಕ್ತಿಯಿಂದ ಶಕ್ತಿ ಪಡೆಯದೆ ಶೈತಾನನ ಜೋಳಿಗೆಗೆ ಬೀಳುವಂತಾಗಬಾರದು. ಅಲ್ಲಾಹನ ಶಕ್ತಿಯ ಸಹಾಯ ಜೊತೆಗಿರದಿದ್ದರೆ ಶೈತಾನನ ಆಕ್ರಮಣ ತೀವ್ರವಾಗಿರುತ್ತದೆ. ಅವನು ಕೂಡಲೆ ತನ್ನ ಸ್ವಾಧೀನಕ್ಕೆ ತೆಗೆದುಕೊಳ್ಳುತ್ತಾನೆ. ಆದುದರಿಂದ ಇಸ್ತಿಗ್‌ಫಾರ್ ಪ್ರಾರ್ಥನೆ ಮಾಡುವುದು ಆವಶ್ಯಕವಾಗಿದೆ. ಅಲ್ಲಾಹನಿಂದ ಶಕ್ತಿ ಪಡೆಯಲು ಮತ್ತು ಶೈತಾನನಿಂದ ಯಾವಾಗಲೂ ರಕ್ಷಿಸಲ್ಪಡಲು ಇದು ಮನುಷ್ಯನಿಗೆ ಆವಶ್ಯಕವಾಗಿದೆ.

ಮನುಷ್ಯನ ಪ್ರಕೃತಿ ಬಲಹೀನವಾಗಿದೆ. ಈ ಬಲಹೀನತೆಯಿಂದ ರಕ್ಷಣೆ ಪಡೆಯಲು, ಅಲ್ಲಾಹನ ಶಕ್ತಿಯಿಂದ ಶಕ್ತಿಯನ್ನು ಗಳಿಸಲು ಇಸ್ತಿಗ್‌ಫಾರ್ ಪ್ರಾರ್ಥನೆ ಮಾಡುವುದು ಆವಶ್ಯಕವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ: "ಮನುಷ್ಯನು ತನ್ನ ಸತ್ಕರ್ಮಗಳನ್ನು ಯಾವಾಗಲೂ ಮಾಡುತ್ತಾ ಇರಲು, ಅಲ್ಲಾಹನ ಅನುಗ್ರಹಗಳನ್ನು ತನ್ನ ಮೇಲೆ ಯಾವಾಗಲೂ ಇಳಿಸಲು ಅಲ್ಲಾಹನ ಸಹಾಯದ ಆವಶ್ಯಕತೆ ಇದೆ. ಅಲ್ಲಾಹನ ಸಹಾಯವಿಲ್ಲದಿದ್ದರೆ ನಾವು ಏನನ್ನೂ ಮಾಡಲು ಸಾಧ್ಯವಾಗದು. ಅಲ್ಲಾಹನು ತನ್ನನ್ನು **ಖಯ್ಯೂಮ್** (ನೆಲೆ ನಿಲ್ಲಿಸುವವ) ಎಂದು ಹೇಳಿ ಅವನ ಈ ಗುಣ, ಸತ್ಕರ್ಮಗಳನ್ನು ಜಾರಿಗೊಳಿಸಲು ಅವನ ಅನುಗ್ರಹ ಮತ್ತು ಕ್ಷಮೆಯನ್ನು ಗಳಿಸಲು ಯಾವಾಗಲೂ ಅವನ ಸಹಾಯದ ಆವಶ್ಯಕತೆ ಇದೆ ಎಂದು ಸೂಚಿಸಿರುವನು. ಅಲ್ಲಾಹನು ತನ್ನ **ಖಯ್ಯೂಮ್** ಎಂಬ ಗುಣದ ಮೂಲಕ ಹೀಗೆ ಹೇಳುತ್ತಾನೆ– ನೀವು ಯಾವುದಾದರೂ ಕೆಲಸವನ್ನು ಯಾವಾಗಲೂ ಜಾರಿಯಾಗಿರಲು ಬಯಸುವುದಾದರೆ ನನ್ನ ಸಹಾಯದ ಆವಶ್ಯಕತೆ ಇದೆ. ಆದುದರಿಂದ ನನ್ನ ಕಡೆಗೆ ಬನ್ನಿರಿ ಎಂದು. ಆದುದರಿಂದ ಈ ಸಹಾಯವನ್ನು ಬಿಟ್ಟುಬಿಡಬೇಡಿರಿ. ಅದು ಶಾಶ್ವತವಾಗಿರುವುದಾಗಿದೆ. ಅಲ್ಲಾಹನು ಯಾವಾಗಲೂ ನೆಲೆನಿಲ್ಲುವವನಾಗಿದ್ದಾನೆ. ಅವನು ಎಲ್ಲದಕ್ಕಿಂತಲೂ ಬಲಿಷ್ಠವಾದ ಸಹಾಯಕನಾಗಿದ್ದಾನೆ."

ರಮಝಾನಿನ ಕೊನೆಯ ಹತ್ತು ದಿನಗಳು ನರಕದಿಂದ ರಕ್ಷಿಸುವ ದಿನಗಳಾಗಿವೆ ಎಂದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದಾರೆ. ಮನುಷ್ಯನು ಅಲ್ಲಾಹನ ಕಾರುಣ್ಯದ ಚಾದರದಿಂದ ತನ್ನನ್ನು ಸುತ್ತುವಾಗ, ಕ್ಷಮಾಪನೆಯ ಪ್ರಕಾಶದಿಂದ ಶಕ್ತಿಪಡೆದು ಅದರಲ್ಲಿ ಸ್ಥಿರವಾಗಿ ನಿಲ್ಲುವಾಗ ಅವನು ಅಲ್ಲಾಹನ ಸಾಮೀಪ್ಯ ಗಳಿಸುವವನಾಗುತ್ತಾನೆ. ಅಲ್ಲಾಹನು ಯಾರಿಗೂ ಪ್ರತಿಫಲ ನೀಡದೆ ಬಿಡುವುದಿಲ್ಲ. ಅವನು ಬಹಳ ದಯಾಳುವಾಗಿದ್ದಾನೆ. ಅವನು ಬಹಳ ದೊಡ್ಡ ದಾನಿಯೂ ಆಗಿದ್ದಾನೆ.

ಸ್ವರ್ಗ ನರಕಗಳ ವಾಸ್ತವಿಕತೆ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ: "ಧರ್ಮದ ಉದ್ದೇಶವೇನು? ಅಲ್ಲಾಹನ ಅಸ್ತಿತ್ವ ಮತ್ತು ಅವನ ಗುಣವಿಶೇಷಗಳ ಬಗ್ಗೆ ದೃಢವಾದ ವಿಶ್ವಾಸಗಳಿಸುವುದು; ಶಾರೀರಿಕ ಆಶಾಭಿಲಾಷೆಗಳಿಂದಲೂ ಭಾವೋದ್ವೇಗಗಳಿಂದಲೂ ರಕ್ಷಣೆ ಪಡೆಯುವುದು; ಅಲ್ಲಾಹನೊಂದಿಗೆ ವೈಯಕ್ತಿಕ ಪ್ರೀತಿ ಉಂಟಾಗುವುದು. ವಾಸ್ತವಿಕವಾಗಿ ಇದೇ ಸ್ವರ್ಗವಾಗಿದೆ. ಅದು ಪರಲೋಕದಲ್ಲಿ ವಿವಿಧ ರೀತಿಗಳಲ್ಲಿ ಪ್ರಕಟವಾಗುವುದು. ವಾಸ್ತವಿಕವಾದ ದೇವನ ಬಗ್ಗೆ ತಿಳಿಯದಿರುವುದು, ಅವನಿಂದ ದೂರವಿರುವುದು, ಅವನನ್ನು ಸತ್ಯವಾಗಿ ಪ್ರೀತಿಸದಿರುವುದು ಇದು ಯಥಾರ್ಥದಲ್ಲಿ ನರಕವಾಗಿದೆ. ಅದು ಪರಲೋಕದಲ್ಲಿ ವಿವಿಧ ರೀತಿಗಳಲ್ಲಿ ಪ್ರಕಟಗೊಳ್ಳುವುದು."

ಒಟ್ಟಿನಲ್ಲಿ, ನಾವು ಒಂದು ಅಂಶವನ್ನು ಮನವರಿಕೆ ಮಾಡಿಕೊಳ್ಳುವುದು ಆವಶ್ಯಕವಾಗಿದೆ. ನರಕದಿಂದ ವಿಮೋಚನೆ ಇದೇ ಲೋಕದಿಂದ ಪ್ರಾರಂಭವಾಗುತ್ತದೆ. ಸ್ವರ್ಗ ಸಿಗುವುದು ಸಹ ಇಲ್ಲಿಂದಲೇ ಪ್ರಾರಂಭವಾಗುತ್ತದೆ. ಇವೆರಡರ ವಿಶಾಲವಾದ ಪ್ರಭಾವಗಳು ವಿವಿಧ ಪರಿಸ್ಥಿತಿಗಳಲ್ಲಿ ವಿವಿಧ ರೂಪಗಳಲ್ಲಿ ಮನುಷ್ಯನಿಗೆ ಪರಲೋಕದಲ್ಲಿ ಲಭಿಸುತ್ತವೆ. ಅಲ್ಲಾಹನೊಂದಿಗೆ ವಾಸ್ತವಿಕ ಸಂಬಂಧ, ಪಶ್ಚಾತ್ತಾಪಗೊಂಡು ಮಾಡುವ ಪ್ರಾರ್ಥನೆ (ತೌಬ) ಮತ್ತು ಕ್ಷಮೆಯಾಚನೆ (ಇಸ್ತಿಗ್‌ಫಾರ್) ಇವುಗಳು ಮನುಷ್ಯನಿಗೆ ಸ್ವರ್ಗವನ್ನು ತೋರಿಸಿಕೊಡುತ್ತವೆ. ಅವುಗಳ ವಿಶಾಲವಾದ ಬಹುಮಾನಗಳು ಪರಲೋಕದಲ್ಲಿ ಸಿಗುವುವು. ಅಲ್ಲಾಹನೊಂದಿಗೆ ಸತ್ಯಸಂಧವಾಗಿ ಸಂಬಂಧ ಸ್ಥಾಪಿಸದಿರುವುದು, ಅವನನ್ನು ಪ್ರೀತಿಸದಿರುವುದು, ಅವನ ಕಾರುಣ್ಯ ಮತ್ತು ಕ್ಷಮೆ ಯಾವಾಗಲೂ ಬೇಡಿಕೊಳ್ಳದಿರುವುದು, ಅವನ ಆಜ್ಞೆಗಳನ್ನು ಪ್ರಜ್ಞಾಪೂರ್ವಕವಾಗಿ ಉಲ್ಲಂಘಿಸುವುದು, ಇವುಗಳೆಲ್ಲಾ ಅಲ್ಲಾಹನ ಕೋಪಕ್ಕೆ ಕಾರಣಗಳಾಗುತ್ತವೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ: "ಸ್ವರ್ಗ ನರಕಗಳ ವಾಸ್ತವಿಕತೆ ಬಗ್ಗೆ ಪವಿತ್ರ ಖುರ್‌ಆನ್ ವಿವರಿಸಿದಂತಹ ರೀತಿಯಲ್ಲಿ ಬೇರೆ ಯಾವ ಧಾರ್ಮಿಕ ಗ್ರಂಥವೂ ವಿವರಿಸಿಲ್ಲ. ಇಹ ಲೋಕದಿಂದಲೇ ಇವೆರಡು ಪ್ರಾರಂಭವಾಗುತ್ತವೆ ಎಂದು ಸ್ಪಷ್ಟವಾಗಿ ಪವಿತ್ರ ಖುರ್‌ಆನ್ ಹೇಳಿದೆ. **ವ ಲಿಮನ್ ಖಾಫ ಮಖಾಮರಬ್ಬಿಹೀ ಜನ್ನತಾನ್.** (55: 47) (ತನ್ನ ಪ್ರಭುವಿನ ಮಹೋನ್ನತ ಸ್ಥಾನದ ಬಗ್ಗೆ ಭಯಪಡುವವನಿಗೆ ಎರಡು ಸ್ವರ್ಗಗಳಿವೆ) ಎಂದು ಪವಿತ್ರ ಖುರ್‌ಆನ್ ಹೇಳಿದೆ. ಅಂದರೆ, ಅಲ್ಲಾಹನ ಸನ್ನಿಧಿಯಲ್ಲಿ ನಿಂತುಕೊಳ್ಳಲು ಭಯಪಡುವವನಿಗೆ ಎರಡು ಸ್ವರ್ಗಗಳಿವೆ. ಅವನಿಗೆ ಒಂದು ಸ್ವರ್ಗ ಈ ಲೋಕದಲ್ಲಿ ಸಿಗುತ್ತದೆ. ಏಕೆಂದರೆ ಅಲ್ಲಾಹನ ಬಗ್ಗೆ ಅವನು ಹೊಂದಿರುವ ಭಯ ಅವನನ್ನು ಕೆಟ್ಟ ಕೆಲಸಗಳಿಂದ ತಡೆಯುತ್ತದೆ. ಕೆಟ್ಟ ಕೆಲಸಗಳಿಂದ ದೂರ ಸರಿಯುವುದರಿಂದ ಸ್ವರ್ಗ ಸಿಗುತ್ತದೆ. ಕೆಟ್ಟ ಕೆಲಸಗಳ ಕಡೆಗೆ ಹೋಗುವುದರಿಂದ ಹೃದಯದಲ್ಲಿ ಗಾಬರಿ ಉಂಟಾಗುತ್ತದೆ. ಅದು ಅಸ್ಪಷ್ಟತೆ ಉಂಟುಮಾಡುತ್ತದೆ. ಕೆಡುಕುಗಳ ಕಡೆಗೆ ಹೋಗುವುದು ಒಂದು ಭಯಾನಕ ನರಕವೇ ಆಗಿದೆ."

ಇದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು, ಈ ಲೋಕದ ಸ್ವರ್ಗಮಯಿ ಜೀವಿತ ಅಥವಾ ಪರಲೋಕದ ಸ್ವರ್ಗ ಗಳಿಸಲು ಮಾಡಬೇಕಾದ ಪ್ರಯತ್ನ ಮತ್ತು ನರಕದಿಂದ ರಕ್ಷಣೆ ಪಡೆಯುವುದು ಹೇಗೆ ಎನ್ನುವುದರ ಬಗ್ಗೆ ನೀಡಿದ ವಿವರಣೆಗಳಾಗಿವೆ. ಪವಿತ್ರ ಖುರ್‌ಆನ್‌ನಲ್ಲಿ ನರಕದಿಂದ ರಕ್ಷಿಸಲ್ಪಡುವುದು ಮತ್ತು ಸ್ವರ್ಗದ ಗಳಿಕೆ ಬಗ್ಗೆ ಹೇಳಿದುದು ಕೇವಲ ಪರಲೋಕದ ಸ್ವರ್ಗ ನರಕಗಳಿಗೆ ಸಂಬಂಧಿಸಿ ಮಾತ್ರ ಹೇಳಿದುದಲ್ಲ. ಈ ಲೋಕದಲ್ಲಿ ಸಹ ಸ್ವರ್ಗ ನರಕಗಳಿವೆ. ನರಕದಿಂದ ರಕ್ಷಿಸಲ್ಪಡಲು ಸಾಧ್ಯವಾಗುವುದು ಅಲ್ಲಾಹನನ್ನು ಭಯಪಡುವಾಗ ಮಾತ್ರವಾಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು, ವಾಸ್ತವಿಕ ಸತ್ಯವಿಶ್ವಾಸಿ ಅಲ್ಲಾಹನು ಯಾವಾಗಲೂ ತನ್ನನ್ನು ನೋಡುತ್ತಿದ್ದಾನೆಂದು ಯೋಚಿಸುತ್ತಾನೆಂದು ಹೇಳಿದ್ದಾರೆ. ಅಲ್ಲಾಹನು ನನ್ನನ್ನು ನೋಡುತ್ತಿದ್ದಾನೆ ಎಂಬ ಯೋಚನೆ ಉಂಟಾದಾಗ ಅಲ್ಲಾಹನ ಭಯ ತಲೆದೋರುತ್ತದೆ. ಆಗ ಮನುಷ್ಯನು ಕೆಡುಕುಗಳಿಂದ ರಕ್ಷಿಸಲ್ಪಡುತ್ತಾನೆ. ಅವನು ಹೃದಯದ ಗಾಬರಿ ಮತ್ತು ಅಸ್ವಸ್ಥತೆಗಳಿಂದಲೂ ರಕ್ಷಿಸಲ್ಪಡುತ್ತಾನೆ. ಯಾವಾಗಲೂ ಈ ವಿಷಯ ನೆನಪಿಡಬೇಕು. ಮತ್ತು ವರ್ತಿಸಬೇಕು.

ರಮಝಾನಿನ ಈ ಕೊನೆಯ ಹತ್ತು ದಿನಗಳಲ್ಲಿ ಅಲ್ಲಾಹನ ಸಂಪ್ರೀತಿ ಗಳಿಸಲು, ಸತ್ಯವಿಶ್ವಾಸವನ್ನು ಕಾಪಾಡಲು ತಖ್ವವನ್ನು ಹೊಂದಲು ಇನ್ನೊಂದು ವಿಷಯದ ಬಗ್ಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಮ್ಮ ಗಮನವನ್ನು ಸೆಳೆದಿದ್ದಾರೆ. ಅವರು ಒಂದು ಶುಭವಾರ್ತೆ ನೀಡಿದ್ದಾರೆ. ಈ ಕೊನೆಯ ಹತ್ತು ದಿನಗಳಲ್ಲಿ ಲೈಲತುಲ್ ಖದ್ರ್ ಬರುವ ಬಗ್ಗೆ ಹೇಳುತ್ತಾರೆ. ಒಂದು ಹದೀಸಿನಲ್ಲಿ ಹಝ್ರತ್ ಅಬೂಹುರೈರ ರಝಿಯಲ್ಲಾಹು ಅನ್‌ಹು ವರದಿ ಮಾಡುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: "ಒಬ್ಬನು ಸತ್ಯವಿಶ್ವಾಸವನ್ನು ಹೊಂದಿ, ಆತ್ಮ ಪರಿಶೋಧನೆ ಮಾಡುತ್ತಾ ರಮಝಾನಿನ ಉಪವಾಸ ವ್ರತ ಅನುಷ್ಠಿಸಿದರೆ ಅವನು ಹಿಂದೆ ಮಾಡಿದ ಪಾಪಗಳು ಕ್ಷಮಿಸಲ್ಪಡುವುವು. ಅದೇ ರೀತಿ ಒಬ್ಬನು ಸತ್ಯವಿಶ್ವಾಸಿಯಾಗಿದ್ದು ಆತ್ಮ ಪರಿಶೋಧನೆ ನಡೆಸುತ್ತಾ ಲೈಲತುಲ್ ಖದ್ರ್ ರಾತ್ರಿ ನಿಂತು ನಮಾಝ್ ಮಾಡಿದರೆ ಅವನ ಹಿಂದಿನ ಪಾಪಗಳು ಕ್ಷಮಿಸಲ್ಪಡುವುವು." ಲೈಲತುಲ್ ಖದ್ರ್ ಬಹಳ ಮಹತ್ವಪೂರ್ಣವಾದುದಾಗಿದೆ. ಆದರೆ ಅದೇ ರೀತಿ ರಮಝಾನಿನ ಉಪವಾಸಗಳು ಸಹ ಮಹತ್ವವುಳ್ಳವುಗಳಾಗಿವೆ. ಆ ಒಂದು ರಾತ್ರಿ ಪಾಪಗಳು ಕ್ಷಮಿಸಲ್ಪಡುತ್ತವೆ ಎನ್ನುವುದು ಸತ್ಯವೇ ಆಗಿದೆ. ಆದರೆ ಹಿಂದೆ ಮಾಡಿದ ಕರ್ಮಗಳೂ ರಮಝಾನಿನ ಮೂವತ್ತು ದಿನಗಳ ಕರ್ಮಗಳೂ ಇವೆ. ಅಲ್ಲಾಹನು ಹೇಳಿದ್ದಾನೆ ಈ ಶರತ್ತುಗಳೂ ಆವಶ್ಯಕವಾಗಿವೆ ಎಂದು. ರಮಝಾನಿನ ಉಪವಾಸಗಳು, ಲೈಲತುಲ್ ಖದ್ರ್ ಗಳಿಸುವುದು, ಪಾಪ ಕ್ಷಮಿಸಲ್ಪಡುವುದು ಇವೆಲ್ಲವೂ ಸತ್ಯವಿಶ್ವಾಸ ಮತ್ತು ಆತ್ಮ ಪರಿಶೋಧನೆಯೊಂದಿಗೆ ಜೋಡಿಸಲ್ಪಟ್ಟಿದೆ. ಮೊದಲಿನ ದಿನಗಳಲ್ಲಿ ಯಾವುದಾದರು ಬಲಹೀನತೆ ಉಂಟಾಗಿದ್ದರೆ ಕೊನೆಯ ದಿನಗಳಲ್ಲಿ ಅವುಗಳನ್ನು ನಿವಾರಿಸಲು ಪ್ರಯತ್ನಿಸಬೇಕು. ಲೈಲತುಲ್ ಖದ್ರ್ ಮಾತ್ರ ಯಾರಿಗೆ ಲಭಿಸುತ್ತದೆಯೋ ಅವನ ಪಾಪಗಳು ಕ್ಷಮಿಸಲ್ಪಡುತ್ತವೆ ಎಂದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿಲ್ಲ. ಯಾರು ಉಪವಾಸ ಮಾಡುತ್ತಾ ಲೈಲತುಲ್ ಖದ್ರ್‌ರನ್ನು ಸತ್ಯವಿಶ್ವಾಸ ಹೊಂದಿ ಆತ್ಮ ಪರಿಶೋಧನೆ ನಡೆಸುತ್ತಾ ದಾಟಿಹೋಗುತ್ತಾನೋ ಅವನು ಅಲ್ಲಾಹನಿಂದ ಕ್ಷಮೆಯನ್ನು ಪಡೆಯುವ ಪ್ರತೀಕ್ಷೆ ಹೊಂದಬೇಕು. ಅಂತಹವರನ್ನು ಅಲ್ಲಾಹನು ಕ್ಷಮಿಸುತ್ತಾನೆ ಎಂದು ಹೇಳಿರುವರು.

ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಸತ್ಯವಿಶ್ವಾಸಿಗಳ ಅನೇಕ ಚಿಹ್ನೆಗಳ ಬಗ್ಗೆ ಪ್ರಸ್ತಾಪಿಸಿದ್ದಾನೆ. ಅವುಗಳಲ್ಲಿ ಒಂದು ಇದಾಗಿದೆ: **ಇನ್ನಮಲ್ ಮೂಮಿನೂನಲ್ಲಝೀನ ಇಝಾ ಝುಕಿರಲ್ಲಾಹು ವಜಿಲತ್ ಖುಲೂಬುಹುಮ್.** "ನಿಜವಾದ ಸತ್ಯವಿಶ್ವಾಸಿಗಳು ಯಾರೆಂದರೆ, ಅಲ್ಲಾಹನ ಕುರಿತು ಹೇಳಲ್ಪಡುವಾಗ ಅವರ ಹೃದಯಗಳು ಭಯಕಂಪಿತವಾಗುತ್ತವೆ." (ಪವಿತ್ರ ಖುರ್‌ಆನ್ 8: 2) ಸತ್ಯವಿಶ್ವಾಸಿಯ ಚಿಹ್ನೆ ಏನೆಂದರೆ ಅಲ್ಲಾಹನ ಆಜ್ಞೆಗಳನ್ನು ಪಾಲಿಸುವುದು ಆವಶ್ಯಕವೆಂದು ಅವನು ಯಾವಾಗಲೂ ಯೋಚಿಸುತ್ತಾ ಇರುತ್ತಾನೆ. ಅಲ್ಲಾಹನಿಗೆ ಸಂಬಂಧಿಸಿ ಯಾವುದಾದರೂ ವಿಷಯವನ್ನು ನೆನಪಿಸಿದರೆ ಅವನು ಕೂಡಲೆ ಭಯಗೊಳ್ಳುತ್ತಾನೆ ಮತ್ತು ಅಲ್ಲಾಹನ ಆಜ್ಞೆ ಪ್ರಕಾರ ವರ್ತಿಸಲು ಪ್ರಯತ್ನಿಸುತ್ತಾನೆ.

ಒಟ್ಟಿನಲ್ಲಿ, ರಮಝಾನ್ ಮತ್ತು ಲೈಲತುಲ್ ಖದ್ರ್‌ನ ಅನುಗ್ರಹಗಳು ಶರತ್ತುಗಳಿಗೆ ಅಧೀನವಾಗಿವೆ. ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಆಜ್ಞೆಗಳನ್ನು ಪಾಲಿಸುವುದೇ ಆ ಶರತ್ತುಗಳಾಗಿವೆ. ಒಬ್ಬ ಮನುಷ್ಯನ ವಿಶ್ವಾಸದಲ್ಲಿ ಬಲಹೀನತೆಗಳಿವೆ, ಅವನು ಅನ್ಯರ ಹಕ್ಕುಗಳನ್ನು ಅಪಹರಿಸುತ್ತಿದ್ದಾನೆ, ಇಂತಹ ವ್ಯಕ್ತಿ ಸಹ ತಾನು ಲೈಲತುಲ್ ಖದ್ರ್ ದರ್ಶಿಸಿದೆ ಎಂದು ಹೇಳಿದರೆ ಮತ್ತು ಪ್ರಾರ್ಥನೆ ಮಾಡುವ ವಿಶಿಷ್ಟ ಆಸಕ್ತಿ ಆತನಲ್ಲಿ ಉಂಟಾಗಿ ಅವನ ಸ್ಥಿತಿಯಲ್ಲಿ ಪೂರ್ಣ ಕ್ರಾಂತಿ ಉಂಟಾದರೆ ಅವನಿಗೆ ಅಲ್ಲಾಹನು ಅನುಗ್ರಹ ದಯಪಾಲಿಸಿದನು ಎಂದು ಹೇಳಬಹುದಾಗಿದೆ. ಅಂತಹ ವ್ಯಕ್ತಿ ಅಲ್ಲಾಹನ ಆಜ್ಞೆಗಳನ್ನು ಪಾಲಿಸುತ್ತಾ ಮುಂದುವರಿಯಬೇಕು. ಆದರೆ ಅವನು ಹೀಗೆ ಮಾಡುವುದಿಲ್ಲವಾದರೆ ಅವನು ಲೈಲತುಲ್ ಖದ್ರ್ ಎಂದು ಭಾವಿಸಿದುದು ಕೇವಲ ಒಂದು ರಾತ್ರಿ ಮಾತ್ರ ಆಗಿರಬಹುದು. ಅವನಿಗೆ ಮಾನಸಿಕ ವಿಭ್ರಾಂತಿ ಉಂಟಾಗಿರಬಹುದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದುದೇನೆಂದರೆ ಸತ್ಯವಿಶ್ವಾಸ ಪರಿಪೂರ್ಣವಾಗಿದ್ದವನು ಮತ್ತು ಆತ್ಮ ಪರಿಶೋಧನೆ ಮಾಡುವವನು ಲೈಲತುಲ್ ಖದ್ರ್‌ರನ್ನು ದರ್ಶಿಸುವನು ಎಂದಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿರುವರು: ಲೈಲತುಲ್ ಖದ್ರ್ ಎಂದರೆ ರಮಝಾನಿನ ಒಂದು ವಿಶಿಷ್ಟ ರಾತ್ರಿ ಮಾತ್ರವಲ್ಲ. ಅದು ಮೂರು ರೀತಿಗಳಲ್ಲಿದೆ. ಒಂದು ರಮಝಾನಿನ ಆ ವಿಶಿಷ್ಟ ರಾತ್ರಿ. ಲೈಲತುಲ್ ಖದ್ರ್ ಪದದ ಇನ್ನೊಂದು ಅರ್ಥ ಪ್ರವಾದಿಯ ಕಾಲಘಟ್ಟ ಎಂದು. ಮೂರನೆಯದು ಪ್ರತಿಯೊಬ್ಬ ಮನುಷ್ಯನಿಗೆ ಒಂದು ಲೈಲತುಲ್ ಖದ್ರ್ ಇದೆ. ಅವನು ಎಲ್ಲ ವಿಧಗಳ ಮಾಲಿನ್ಯಗಳಿಂದ ಮುಕ್ತನಾಗಿ ಶುದ್ಧನಾಗಿ ಸತ್ಯವಿಶ್ವಾಸದಲ್ಲಿ ಬಲಯುತವಾಗಿ ನೆಲೆವೂರುವವನಾಗಿ ತನ್ನ

ಆತ್ಮ ಪರಿಶೋಧನೆ ನಡೆಸುತ್ತಾ ಎಲ್ಲಾ ಕೆಡುಕುಗಳಿಂದ ತನ್ನನ್ನು ದೂರ ಸರಿಸುವಾಗ ಅವನಿಗೆ ಅದು ಲೈಲತುಲ್ ಖದ್‌ರ್ ಆಗುತ್ತದೆ. ಈ ಲೈಲತುಲ್ ಖದ್‌ರ್ ನಮಗೆ ದೊರೆತರೆ ನಾವು ಪೂರ್ಣವಾಗಿ ಅಲ್ಲಾಹನಿಗೆ ಸೇರಿದವರಾದರೆ, ಅವನ ಆಜ್ಞೆಗಳನ್ನು ಪಾಲಿಸುವವರಾದರೆ, ನಮ್ಮ ಆರಾಧನೆಗಳ ಮಟ್ಟವನ್ನು ಎತ್ತರಗೊಳಿಸುತ್ತಾ ಹೋಗುವವರಾದರೆ ಇದು ನಮ್ಮ ಉದ್ದೇಶ ಲಕ್ಷ್ಯವಾಗಿರುವುದು. ಅದನ್ನು ಗಳಿಸಲು ಅಲ್ಲಾಹನು ನಮಗೆ ಆಜ್ಞೆ ನೀಡಿದ್ದನು. ನಾವು ಈ ಸ್ಥಾನವನ್ನು ಪಡೆದರೆ ಅಥವಾ ನಾವು ಹೇಗೆಲ್ಲಾ ಮಾಡುವವರಾದರೆ ನಮ್ಮ ಪ್ರತಿಯೊಂದು ದಿನವೂ ಪ್ರತಿಯೊಂದು ರಾತ್ರಿಯೂ ನಮಗೆ ನಮ್ಮ ಪ್ರಾರ್ಥನೆಗಳು ಅಂಗೀಕರಿಸಲ್ಪಡುವ ಕಾಲವಾಗುವುದು. ನಾವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧನಾದ ಪ್ರೇಮಿಯನ್ನು ನಂಬುವವರಾಗಿದ್ದೇವೆ. ನಾವು ನಮ್ಮ ಸ್ಥಿಯಲ್ಲಿ ಕ್ರಾಂತಿಯನ್ನು ಉಂಟುಮಾಡಿ ನಮ್ಮ ವಿಶ್ವಾಸವನ್ನು ಎಂತಹ ಮಟ್ಟಕ್ಕೆ ತೆಗೆದುಕೊಂಡು ಹೋಗುವ ಆವಶ್ಯಕತೆ ಇದೆ ಎಂದರೆ ನಮ್ಮ ಪ್ರತಿಯೊಂದು ಮಾತು ಮತ್ತು ಕೆಲಸ ಅಲ್ಲಾಹನ ಸಂಪ್ರೀತಿ ಗಳಿಸಲಿಕೋಸ್ಕರವಾಗಿರಬೇಕು. ನಾವು ನಮ್ಮ ಆತ್ಮ ಪರಿಶೋಧನೆ ಮಾಡುತ್ತಾ ಜೀವಿಸುವವರಾಗಬೇಕು. ರಮಝಾನಿನ ಅನುಗ್ರಹಗಳು ಯಾವಾಗಲೂ ನಮ್ಮಲ್ಲಿ ನೆಲೆ ನಿಲ್ಲಬೇಕು.

ನಮ್ಮಲ್ಲಿ ಬಹುತೇಕ ಜನರು ಲೈಲತುಲ್ ಖದ್‌ರ್ ಗಳಿಸುವವರಾಗುವ ಭಾಗ್ಯ ಅಲ್ಲಾಹನು ದಯಪಾಲಿಸಲಿ. ಅದು ಪ್ರಾರ್ಥನೆ ಅಂಗೀಕಾರ ಪಡೆಯುವ ವಿಶಿಷ್ಟ ಸಂದರ್ಭವಾಗಿದೆ. ರಮಝಾನಿನ ಕೊನೆಯ ದಿನಗಳಲ್ಲಿ ದೊರಕುವುದಾಗಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದಾರೆ. ಅದನ್ನು ಗಳಿಸುವುದು ಸತ್ಕರ್ಮಗಳಲ್ಲೂ ತಖ್ವದಲ್ಲೂ ನಮ್ಮನ್ನು ಚಲಾಯಿಸುವಂತೆ ಮಾಡಲಿ. ಮತ್ತು ಇನ್ನಷ್ಟು ವರ್ಧಿಸುವಂತೆ ಮಾಡಲಿ. ನಮ್ಮ ಹಿಂದಿನ ಪಾಪಗಳು ಕ್ಷಮಿಸಲ್ಪಡಲಿ. ಮುಂದೆ ಪಾಪ ಮಾಡದಿರುವಂತಹ ಶಕ್ತಿ ಸಾಮರ್ಥ್ಯಗಳನ್ನು ಅಲ್ಲಾಹನು ತನ್ನ ವಿಶಿಷ್ಟ ಅನುಗ್ರಹದಿಂದ ನಮಗೆ ದಯಪಾಲಿಸಲಿ – ಆಮೀನ್.

–––––––––––––––*****–––––––––––––––

***Friday Sermon delivered by Hadrath Khaleefatul Masih Al Khamis*** *(atba)*

*at Masjid Baithul Futhuh, London on 10-07-2015.*

**Summarized by** *Majlis Ansarullah Bharat*

***Kannada Translation****:* M. Ubeidullah for Kannada Desk, Qadian

***Reviewed by****:* M.P Ibrahim | ***Typing****:* U Basheer Ahmad

***Published By****:* Kannada Isha'at Team for Nazarath Nashr-O-Isha'ath, Qadian

***Email*****:** *khutuba.kannada@gmail.com*

**You can find all the Sermons archived at**: www.alislam.org/friday-sermon